(2) ಕ್ರೀಡಾಂಗಣ

(3) ಕಟ್ಟಡಗಳ ನಿರ್ವಹಣೆ.

(4) ವಿದ್ಯಾರ್ಥಿನಿಲಯ

1999-2000 ನೇ ಸಾಲಿನಲ್ಲಿ (150 ಲಕ್ಷ ರೂ.ಗಳ ಅಂದಾಜಿನಲ್ಲಿ)

(1) 1997-98 ಮತ್ತು 1998-99ನೇ ಸಾಲಿನ ಅಪೂರ್ಣ ಕಟ್ಟಡಗಳ ಕಾಮಗಾರಿಗಳು.

2000-2001ನೇ ಸಾಲಿನಲ್ಲಿ (570.20 ಲಕ್ಷ ರೂ.ಗಳ ಅಂದಾಜಿನಲ್ಲಿ)

(1) ಆಡಳಿತ ಭವನ.

(2) ಉದ್ಯೋಗಸ್ಥ ಮಹಿಳೆಯರ ವಸತಿ ಗೃಹ.

(3) ಮ್ಯೂಸಿಯಂ.

(4) ಕ್ರೀಡಾಂಗಣ.

(5) ಗ್ರಂಥಾಲಯ.

ಆ. 1997-98 130.00 ಲಕ್ಷ ರೂ.ಗಳು.

1998-99 130.00 ಲಕ್ಷ ರೂ.ಗಳು.

1999-2000 270.00 ಲಕ್ಷ ರೂ.ಗಳು.

2000-2001 120.00 ಲಕ್ಷ ರೂ.ಗಳು.

ರಾಜ್ಯದ ಅನುದಾನಿತ ಶಾಲೆಗಳಿಗೆ ಕಂಪ್ಯೂಟರ್ ನೀಡಿಕೆ.

161(295)

ಶ್ರೀ ಚಂದ್ರಶೇಖರಪ್ಪ.ಹೆಚ್.ಎಂ.(ಶಿವಮೊಗ್ಗ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಗಣಕ

ಯಂತ್ರಗಳನ್ನು ಸಂಬಂಧಪಟ್ಟ ಶಾಲೆಯಿಂದ ನಿರ್ದಿಷ್ಟ ಮೊತ್ತವನ್ನು ಪಡೆದು ಅನುದಾನಿತ ಶಾಲೆಗಳಿಗೆ ಗಣಕ ಯಂತ್ರಗಳನ್ನು ನೀಡಲು ಸರ್ಕಾರ ಕ್ರಮ ಕೈಗೊಂಡಿದೆಯೇ? (ವಿವರ ಒದಗಿಸುವುದು)

ಶ್ರೀ ಹೆಚ್.ವಿಶ್ವನಾಥ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

ಅ) ಇಲ್ಲ.

ನಾಗಮಂಗಲ ಬಿಂಡಿಗನವಿಲೆ ಹೆರಿಗೆ ಆಸ್ಪತ್ರೆಯಲ್ಲಿ ವೈದ್ಯರು ಹಾಗೂ ಸಿಬ್ಬಂದಿಗಳನ್ನು ನೇಮಿಸುವುದು.

162(286)

ಶ್ರೀ ಚಲುವರಾಯ ಸ್ವಾಮಿ ಎನ್.(ನಾಗಮಂಗಲ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಗಮಂಗಲ ಬಿಂಡಿಗನವಿಲೆ ಹೆರಿಗೆ ಆಸ್ಪತ್ರೆಯ ವೈದ್ಯರ ಮತ್ತು ಇತರ ಸಿಬ್ಬಂದಿಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದೆ;

ಆ) ಎ.ಎನ್.ಎಂ. ಹುದ್ದೆಗಳು ಖಾಲಿ ಇದ್ದು ಇದನ್ನು ಯಾವಾಗ ಭರ್ತಿ ಮಾಡಲಾಗುವುದು.

ಇ) ಕಾಲಿಂಗನಹಳ್ಳಿ ಹಾಗೂ ಹೊನ್ನಾವರ ಅತೀ ದೊಡ್ಡ ಗ್ರಾಮಪಂಚಾಯಿತಿ ಕೇಂದ್ರವಾಗಿದ್ದು ಇಲ್ಲಿಗೆ ಪ್ರಾಥಮಿಕ ಆರೋಗ್ಯ ಕೇಂದ್ರ ಅವಶ್ಯಕತೆ ಇದ್ದು ಸರ್ಕಾರವನ್ನು ಇದುವರೆವಿಗೂ ಒತ್ತಾಯಿಸುತ್ತಾ ಬಂದಿದ್ದರೂ ಯಾವ ಕ್ರಮವನ್ನು ತೆಗೆದುಕೊಳ್ಳದಿರಲು ಕಾರಣಗಳೇನು. ಇದರ ಬಗ್ಗೆ ಈಗಲಾದರೂ ಯೋಗ್ಯ ಕ್ರಮ ಕೈಗೊಳ್ಳುವುದೇ?

ಡಾ: ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬಿಂಡಿಗನವಿಲೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೊಂದಿಕೊಂಡಂತೆ 10 ಹಾಸಿಗೆಗಳ ಪ್ರಸೂತಿ ಗೃಹಕ್ಕೆ 2001-2002 ನೇ ಸಾಲಿನಲ್ಲಿ ಜಿಲ್ಲಾ ಪರಿಷತ್ ಸಾಕಷ್ಟು ಅನುದಾನ ಅಳವಡಿಸಿಕೊಂಡು ಹೆಚ್ಚುವರಿ ಸಿಬ್ಬಂದಿ ಮಂಜೂರು ಮಾಡಲು ಪರಿಶೀಲಿಸಲಾಗುವುದು.